ಮೈಸೂರು ನಗರದ ವ್ಯಾಪ್ತಿಯಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಡಾಂಬರೀಕರಣಗೊಳಿಸುವುದು

66(283) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೈಸೂರು ನಗರದ ವ್ಯಾಪ್ತಿಯಲ್ಲಿರುವ ಲೋಕೋಪಯೋಗಿ ರಸ್ತೆಗಳ ಪೈಕಿ ಯಾವ ಯಾವ ರಸ್ತೆಗಳಿಗೆ ಡಾಂಬರೀಕರಣ ಆಗಬೇಕಿದೆ?

ಆ) ಈ ರಸ್ತೆಗಳಿಗೆ ಡಾಂಬರೀಕರಣ ಮಾಡಲು ತಗಲುವ ವೆಚ್ಚ ಎಷ್ಟಾಗುವುದು?

ಇ) ಈ ರಸ್ತೆಗಳಿಗೆ ಡಾಂಬರೀಕರಣ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಮೈಸೂರು ನಗರದ ವ್ಯಾಪ್ತಿಯಲ್ಲಿರುವ ಎಲ್ಲಾ 14 ಲೋಕೋಪಯೋಗಿ ರಸ್ತೆಗಳಿಗೆ ಮರು ಡಾಂಬರೀಕರಣದ ಅವಶ್ಯಕತೆ ಇರುತ್ತದೆ. (21.36 ಕಿಮಿ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಪೇವರ್ ಉಪಯೋಗಿಸಿ ಎಲ್ಲಾ 14 ಲೋಕೋಪಯೋಗಿ ರಸ್ತೆಗಳನ್ನು ಮರು ಡಾಂಬರೀಕರಿಸಲು ಒಟ್ಟು ರೂ. 225.76 ಲಕ್ಷಗಳ ವೆಚ್ಚವಾಗುತ್ತದೆ.

ಇ) ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು ಮೊದಲನೇ ಹಂತದಲ್ಲಿ ಈಗಾಗಲೇ ಕೈಗೊಂಡಿರುವಂತೆ, ಜಿಲ್ಲಾ ಮುಖ್ಯ ರಸ್ತೆಗಳನ್ನೂ ಸಹ ಮರು ಡಾಂಬರೀಕರಣ ಮಾಡಲು ಯೋಜಿಸಲಾಗಿದೆ.

ಅನುಬಂಧ

ಮೈಸೂರು ವಿಭಾಗ, ಮೈಸೂರು ಲೋಕೋಪಯೋಗಿ ಇಲಾಖೆಯ ನಿರ್ವಹಣೆಯಲ್ಲಿರುವ ಸಿಟಿ ರಸ್ತೆಗಳ ವಿವರ

ಕ್ರ.ಸಂ.	ರಸ್ತೆಗಳ ಹೆಸರು	ರಸ್ತೆಯ ದರ್ಜೆ	ರಸ್ತೆಯ ಉದ್ದ	ರಸ್ತೆಯ ಮೇಲ್ಪ್ರಾವರ ಡಾಂಬರ್ ರಸ್ತೆ	ಎಡಿಬಿ ನೀಡಿರುವ ಉದ್ದ	ಇಲಾಖೆಯ ವಶದಲ್ಲಿರುವುದು
1	2	3	4	5	6	7
1.	ನಗರ ಜಿಲ್ಲಾ ಕಛೇರಿಗೆ ಸೇರುವ ಅಪ್ರೋಚ್ ರಸ್ತೆ	ಜಿಲ್ಲಾ ಮುಖ್ಯ ರಸ್ತೆ	0-30	0-30	-	0-30
2.	ವೆಸ್ಟನ್ ಗೇಟಿನಿಂದ ಜಿಲ್ಲಾ ಕಚೇರಿಗೆ ಸೇರುವ ರಸ್ತೆ	"	1-30	1-30	-	1-30
3.	ಝಾನ್ಸಿಲಕ್ಷ್ಮೀಬಾಯಿ ರಸ್ತೆ	"	4-40	4-40	4-40	-
4.	ಡಾ।। ಅಂಬೇಡ್ಕರ್ ರಸ್ತೆ	"	2-00	2-00	-	2-20
5.	ಮೈಸೂರು-ಮಾನಂದವಾಡಿ ರಸ್ತೆ (ಪ್ರಭುದೇವ ಟಾಕೀಸಿನಿಂದ ನಂಜುಮಳಿಗೆ)	"	1-00	1-00	-	1-00
6.	ಶೇಷಾದ್ರಿ ಐಯರ್ ರಸ್ತೆ	"	1-10	1-10	-	1-10
7.	ಫ್ರಿನ್ಸ್‌ಸ್ ರಸ್ತೆ	"	4-40	4-40	0-57	3-83

1	2	3	4	5	6	7
8.	ನ್ಯೂ ಬನ್ನಿಮಂಟಪ ರಸ್ತೆ ಹಾಗೂ ಡಿವಿಯೇಷನ್ ರಸ್ತೆ	ಜಿಲ್ಲಾ ಮುಖ್ಯ ರಸ್ತೆ	5-80	5-80	1-95	3-85
9.	ಅಶೋಕ ರಸ್ತೆ	"	2-20	2-20	-	2-20
10.	ಹೈದರಾಲಿ ರಸ್ತೆ	"	2-80	2-80	2-80	-
11.	ಅಬ್ಬಾಸ್ ಆಲಿ ರಸ್ತೆ	"	0-40	0-40	-	0-40
12.	ಗೌರ್ನಮೆಂಟ್ ಹೌಸ್ ರಸ್ತೆ	"	0-80	0-80	-	0-80
13.	ರೆಸ್‌ಕೋರ್ಸ್ ರಸ್ತೆ (ಮಾನಸರ ರಸ್ತೆ)	"	2-40	2-40	0-34	2-06
14.	ಕಾರಂಜಿ ಬ್ಲ್ಯಾಕ್ ರಸ್ತೆ	"	1-40	1-40	1-40	-
15.	ನರಸಿಂಹಬುಲ್ವರ್ಡ್ ರಸ್ತೆ	"	0-90	0-90	-	0-90
16.	ಲಲಿತಮಹಲ್ ರಸ್ತೆ	"	1-00	1-00	-	1-00
17.	ಆಯುರ್ವೇದಿಕ್ ರಸ್ತೆಯಿಂದ ರೈಲ್ವೆ ಸ್ಟೇಷನ್ ವೃತ್ತದವರೆಗೆ	"	0-62	0-62	-	0-62
	ಒಟ್ಟು		**32-82**	**32-82**	**11-46**	**21-36 ಕಿಮೀ**

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ :- ಮಾನ್ಯ ಅಧ್ಯಕ್ಷರೆ, ಇವರು ಕೊಟ್ಟಿರುವ 14 ಲೋಕೋಪಯೋಗಿ ರಸ್ತೆಗಳು, ಹಳ್ಳಿಗಳಲ್ಲಿ ರಸ್ತೆಗಳು ಇವಯೋ ಅಥವಾ ರಸ್ತೆಗಳಲ್ಲಿ ಹಳ್ಳಿಗಳು ಇವೆಯೋ ಗೊತ್ತಾಗುತ್ತಿಲ್ಲ. ಅಂತಹ ಹೀನಾಯ ಪರಿಸ್ಥಿತಿ ಅಲ್ಲಿ ರಸ್ತೆಗಳಿಗೆ ಆಗಿದೆ. ಗರ್ಭಿಣಿ ಸ್ತ್ರೀಯರು ರಿಕ್ಷಾದಲ್ಲಿ ಅಥವಾ ಬಸ್ಸಿನಲ್ಲಿ ಹೋದರೆ ಪ್ರಸವ ವೇದನೆ ಬಂದು ಹೆರಿಗೆಯಾಗುವ ಸ್ಥಿತಿಯಾಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ 'ಯೋಚಿಸಲಾಗುತ್ತದೆ' ಎಂದು ಹೇಳಿದ್ದಾರೆ, ಏನು ಇದು? ಶ್ರೀ ಡಿ.ವಿ.ಜಿ. ಯವರು ಒಂದು ಮಾತನ್ನು ಹೇಳುತ್ತಾರೆ.

'ಇರುವ ಕೆಲಸವ ಮಾಡು ಕಿರಿದೆನ್ನದೆ ಮನವಿಟ್ಟು,
ದೊರೆತದು ಅಸಾಧುವೆಂದುಣ್ಣು ಗೊಣಗಿಡದೆ,
ಭರಿಸು ಲೋಕದ ಬರದ ಪರಮಾರ್ಥವನ್ನು ಬಿಡದೆ
ಹೊರಡು ಕರೆವರಲು ಹೇಳು ಮಂಕುತಿಮ್ಮ'.

ನಿಮಗೇನು ಕೆಲಸ ಸಿಕ್ಕಿದೆ, ಮಂತ್ರಿ ಮುಖ್ಯಮಂತ್ರಿಯವರಿಗೆ ಹೆಸರು ಬರಬೇಕಾದರೆ ನೀವು ನಿಮ್ಮ ಕೆಲಸವನ್ನು ಪ್ರಾಮಾಣಿಕವಾಗಿ, ಪರಿಶುದ್ಧವಾಗಿ ಪಕ್ವತೆಯಿಂದ ಮಾಡಿದಾಗ ಮಾತ್ರ ಅವರಿಗೆ ಒಳ್ಳೆಯ ಹೆಸರು ಬರುತ್ತದೆ. ಇಲ್ಲದೇ ಇದ್ದರೆ ಅದು ಕೆಸರು ಆಗುತ್ತದೆ. ದಯಮಾಡಿ ಇಲ್ಲಿ ಕೊಟ್ಟಿರುವಂತಹ ಉತ್ತರವು ಸಮಂಜಸವಲ್ಲ, ಅದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಧರ್ಮಸಿಂಗ್:- ಮಾನ್ಯ ಅಧ್ಯಕ್ಷರೆ, ಈ ಲೋಕೋಪಯೋಗಿ ಇಲಾಖೆ ರಸ್ತೆ, ದುರಸ್ಥಿ ಮಾಡುವಂತಹ ಇಲಾಖೆಯಾಗಿದೆ. ಡಿವಿಜಿಯನ್ನು ಹಾಗೆ ಹೇಳಿರಬಹುದು, ಆದರೆ ಕವನಗಿವನಗಳು ಇದಕ್ಕೆ ಅಪ್ಲೈ ಆಗುವುದಿಲ್ಲ. ಈಗ ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕಂತಹ ರೋಡ್‌ಗಳ ಬಗ್ಗೆ ಮೈಸೂರು ಕಾರ್ಪೋರೇಷನ್‌ನವರೂ ಕೂಡ ಲೋಕೋಪಯೋಗಿ ಇಲಾಖೆಯವರು ಮಹಿಸಿಕೊಡಬೇಕೆಂದು ಇದೆ. ನಾನು ಮೈಸೂರು ಸಿಟಿಗೆ ಬಂದಾಗ ಪ್ರಿನ್ಸ್‌ಸ್ಟ್ರೀಟ್ ಬೇರೆ ಕಡೆಗೆ ಬಂದಂತಹ ಇದ್ದಂತಹ ರೋಡ್‌ಗಳ ಬಗ್ಗೆ ಈಗಾಗಲೇ ಹಣವನ್ನು ಖರ್ಚು ಮಾಡಿ ದುರಸ್ಥಿ ಮಾಡಿದ್ದೇವೆ. ಎಡಿಬಿಯಿಂದಲೂ ಕೂಡ 6 ಕೋಟಿ 13 ಲಕ್ಷ ರೂಪಾಯಿಗಳನ್ನು ಪ್ರಪ್ರಥಮವಾಗಿ ಖರ್ಚು ಮಾಡಿದ್ದೇವೆ. ಇವತ್ತು ತಾವು ನೋಡಿರಬಹುದು. ಮೈಸೂರಿನಲ್ಲಿ ರೋಡ್‌ಗಳು ಬಹಳ ಚೆನ್ನಾಗಿ ರಿಪೇರಿ ಆಗಿದೆ. ಈಗ ಬೇರೆ ಕಡೆಗೆ ಕಾರ್ಪೋರೇಷನ್ ನಲ್ಲಿರತಕ್ಕಂತಹ ರೋಡ್‌ಗಳನ್ನು ಚೆನ್ನಾಗಿ ಮಾಡತಕ್ಕಂತಹ ಕೆಲಸ ನಿಮ್ಮದಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಇರತಕ್ಕಂತಹ ಕೆಲವು ರೋಡ್‌ಗಳನ್ನು ಹಸ್ತಾಂತರ ಮಾಡತಕ್ಕಂತಹ ಪ್ರಪೋಸಲ್ ಹೋಗಿದೆ, ಅದಕ್ಕೆ ಗ್ರಾಂಟ್ ಕೊಡಬೇಕೆಂದು ಹೇಳಿದ್ದಾರೆ, ಅದನ್ನು ವಹಿಸಿಕೊಡುವಂತಹದು, ಈಗಾಗಲೇ ಸರ್ಕಾರ ತೀರ್ಮಾನವನ್ನು ತೆಗೆದುಕೊಂಡಿದೆ.

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ:- ಎಡಿಬಿ ಎನ್ನತಕ್ಕಂಥದ್ದು ಕೆಟ್ಟ ಕಾಯಿಲೆ ಅದು, ಏಡ್ಸ್‌ಗಿಂತಲೂ ಕಡಿಮೆ. ಯಾರೋ ಒಬ್ಬಳು ಸಾಲ ಮಾಡಿ ಓಲೆಯನ್ನು ತೆಗೆದುಕೊಂಡಳು, ಸಾಲಕ್ಕೆ ಬಡ್ಡಿಯನ್ನು ಕಟ್ಟುವುದಕ್ಕೆ ಓಲೆಯನ್ನು ಮಾರಿದಳಂತೆ, ಸಾಲ ಉಳಿದುಕೊಳ್ತು, ಓಲೆನೂ ಹೋಯಿತು ಅಂತಹ ಒಂದು ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಪಿಡಬ್ಲ್ಯೂಡಿಯವರು, ಅದರಲ್ಲೂ ಕೂಡ ತಾವು ಹಳೆಯ ಹಿರಿಯ ಸಚಿವರು, ಪ್ರಾಮಾಣಿಕವಾಗಿ

ಕೆಲಸ ಮಾಡಬೇಕೆನ್ನುವಂತಹ ಕಾಳಜಿ ಇರುವಂತಹವರು, ಈಗ ಈ ರೀತಿಯಾಗಿ ಉತ್ತರವನ್ನು ಕೊಟ್ಟರೆ, ಆ ಉತ್ತರವು ಸಮಂಜಸವಲ್ಲ. ನಾನು ಶಾಸಕನಾಗಿ 7 ವರ್ಷಗಳಾಗಿದೆ, ಆ ರಸ್ತೆಗಳು ಇನ್ನೂ ಹಾಳಾಗಿ ಬಿದ್ದಿದೆಯಲ್ಲಾ ಅದರ ಬಗ್ಗೆ ನೀವು ಗಮನವನ್ನು ಹರಿಸಿದ್ದೀರಾ? ತಾವು ಯೋಚಿಸಲಾಗಿದೆ ಎಂದು ಹೇಳುತ್ತೀರಲ್ಲಾ, ಇದು ಸರಿಯೇ? ತಾವು ಚೆನ್ನಾಗಿ ಕೆಲಸವನ್ನು ಮಾಡಬೇಕು. ಅದರ ಬಗ್ಗೆ ಏನು ಮಾಡಬೇಕೆಂಬುದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಿ.

ಅಧ್ಯಕ್ಷರು:- ಅವರು ಕೆಲಸವನ್ನು ಮಾಡುತ್ತಿದ್ದಾರಲ್ಲಾ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಇದರ ಬಗ್ಗೆ ನಿರ್ದಿಷ್ಟವಾದಂತಹ ಉತ್ತರವನ್ನು ಕೊಡಬೇಕು. ನಾನು ಅಲ್ಲಿಗೆ ಕಳುಹಿಸುತ್ತೇನೆ, ಇಲ್ಲಿಗೆ ಕಳುಹಿಸುತ್ತೇನೆ ಎಂದು ಹೇಳುವುದರಲ್ಲಿ ಅರ್ಥವೇನಿದೆ? ಅದೂ ಕೂಡ ಅಡ್ಡ ಗೋಡೆಯ ಮೇಲೆ ದೀಪವನ್ನು ಇಟ್ಟಹಾಗೆ ಹೇಳುತ್ತಾರೆ. ನೀವು ಕೊಡತಕ್ಕಂತಹ ಉತ್ತರವು ಸಮಂಜಸವಲ್ಲವೆಂದು ನಾನು ಸಂಪೂರ್ಣವಾಗಿ ಹೇಳುತ್ತಿದ್ದೇನೆ. ನಾನು ಹೇಳುವ ಮಾತಿನಲ್ಲಿ ಅರ್ಥಪೂರ್ಣವಾಗಿದೆ.

ಶ್ರೀ ಧರ್ಮಸಿಂಗ್:- ನಾನು ಕೊಡತಕ್ಕಂತಹ ಉತ್ತರ ಸಮಂಜಸವಲ್ಲ, ಏಕಿಲ್ಲ ಎನ್ನತಕ್ಕಂಥದ್ದನ್ನು ತಾವು ಕೇಳಿರಿ, ಅದಕ್ಕೆ ಉತ್ತರವನ್ನು ಕೊಡುವುದಕ್ಕೆ ನಾನು ತಯಾರಾಗಿದ್ದೇನೆ. ಇದರ ಬಗ್ಗೆ ನಾನು ಏನು ಹೇಳುವುದೆಂದರೆ, ಎಡಿಬಿಯಿಂದ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಪಟ್ಟಣ ಪ್ರದೇಶಗಳಲ್ಲಿ ಸಾಲವನ್ನು ತೆಗೆದುಕೊಂಡು ರಸ್ತೆಗಳ ದುರಸ್ಥಿಯನ್ನು ಮಾಡತಕ್ಕಂತಹ ಕಾರ್ಯಕ್ರಮದೊಳಗಡೆ ಅದರ ಅಂತರ್‌ಗತವಾಗಿ ಈಗಾಗಲೇ 6 ಕೋಟಿ 13 ಲಕ್ಷ ರೂಪಾಯಿಗಳನ್ನು ಅಲ್ಲಿ ಖರ್ಚು ಮಾಡಿದ್ದೇವೆ. ನಾನೂ ಕೂಡ ಎರಡು ಸಲ ಬಂದಾಗ, ಲೋಕೋಪಯೋಗಿ ಇಲಾಖೆಗೆ ಬರತಕ್ಕಂತಹ ರಸ್ತೆಗಳ ಬಗ್ಗೆ ಈಗಾಗಲೇ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ. ಸಿಟಿ ಕಾರ್ಪೊರೇಷನ್‌ನವರು 'ನಮಗೆ ವಹಿಸಿಕೊಡಿ' ಎಂದು ಹೇಳಿದ್ದಾರೆ. ಮೈಂಟೆನೆನ್ಸ್ ಗ್ರಾಂಟ್ ಕೊಡಬೇಕೆಂದು ಹೇಳಿದ್ದೇನೆ. 10 ಲಕ್ಷ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ. ಸಿಟಿ ಕಾರ್ಪೊರೇಷನ್‌ನವರು ಲೋಕೋಪಯೋಗಿ ಇಲಾಖೆಗೆ ಸೇರಿರತಕ್ಕಂತಹ ರಸ್ತೆಗಳನ್ನು ನಮಗೆ ಕೊಡಿ ಎಂದು ಹೇಳಿದ್ದಾರೆ. ಅದಕ್ಕೆ ನಾವು ಒಪ್ಪಿದ್ದೇವೆ, ನಾವು ಅವರಿಗೆ ಕೊಟ್ಟಿದ್ದೇವೆ, ಗ್ರಾಂಟ್ ಕೂಡ ಕೊಡುತ್ತಿದ್ದೇವೆ. ಇದು ಸಮಂಜಸವಾದ ಉತ್ತರವಾಗಿದೆ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ:- ಅಲ್ಲಿ ಕೆಲವು ವಾರ್ಡ್‌ಗಳಲ್ಲಿ ನಿಜವಾಗಿಯೂ ಕೂಡ ಸಿಟಿ ಕಾರ್ಪೊರೇಷನ್‌ನವರು ರಸ್ತೆಯನ್ನು ಮಾಡಲಿಕ್ಕೆ ಆಗಲಿಲ್ಲ. ಅದು ಹೇಗೆ ಅವರು ಗ್ರಾಂಟ್ಸ್ ಕೊಡಿ ಎಂದು ಹೇಳುತ್ತಾರೆ. ಮಾನ್ಯ ಸಚಿವರೇ, ಇದು ಸರಿಯಾದಂತಹ ಉತ್ತರವಲ್ಲ.

ಶ್ರೀ ಧರ್ಮಸಿಂಗ್:- ಸಿಟಿ ಕಾರ್ಪೊರೇಷನ್‌ನಲ್ಲಿ ಬರತಕ್ಕಂತಹ ರಸ್ತೆಗಳಿಗೆ ನಾವು ಗ್ರಾಂಟ್‌ನ ಜೊತೆಯಲ್ಲಿಯೇ ಹಸ್ತಾಂತರ ಮಾಡುತ್ತಿದ್ದೇವೆ. ಮೈಂಟೆನೆನ್ಸ್ ಗ್ರಾಂಟ್‌ನ್ನು ಸೂಹ ಕೊಡುತ್ತಿದ್ದೇವೆ, ಇದರ ಜೊತೆಗೆ ಕೂಡ ಹಸ್ತಾಂತರ ಮಾಡುತ್ತಿದ್ದೇವೆ. ಇದರ ಬಗ್ಗೆ ಮೇಯರ್‌ರವರ ಜೊತೆ ಸಮಾಲೋಚನೆಯನ್ನು ಮಾಡಿದಾಗ 'ಸಾರ್, ಇದನ್ನು ಮಾಡುವುದಕ್ಕಾಗುವುದಿಲ್ಲ, ಇದನ್ನು ನಮಗೆ ವಹಿಸಿ, ನಮಗೆ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ಇದೆ, ಮೈಂಟೆನೆನ್ಸ್ ಗ್ರಾಂಟ್ ಕೊಡಿ ಎಂದು ಹೇಳಿದ್ದಾರೆ, ಇದೆಲ್ಲದರ ಜೊತೆಗೆ ಅದನ್ನು ಹಸ್ತಾಂತರ ಮಾಡುತ್ತೇವೆ.

ಶ್ರೀ ಎ. ರಾಮದಾಸ್:- ಕಳೆದ ವರ್ಷದ ಬಜೆಟ್ ಸೆಕ್ಷನ್‌ನಲ್ಲಿ ನನ್ನ ಪ್ರಶ್ನೆಗೆ ಇದೇ ತರಹ ಉತ್ತರವನ್ನು ತಾವು ಕೊಟ್ಟಿದ್ದೀರಿ. ಆ ಸಂದರ್ಭದಲ್ಲಿ ಚರ್ಚೆಯಾದ ನಂತರದಲ್ಲಿ ನಗರಪಾಲಿಕೆಯ ವ್ಯಾಪ್ತಿಯೊಳಗೆ ಬರುತ್ತಿರುವಂತಹ 14 ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತಹ ರಸ್ತೆಗಳಿವೆ, ಆ ರಸ್ತೆಗಳನ್ನು ಸಂಪೂರ್ಣವಾಗಿ ಸುಸ್ಥಿತಿಗೆ ತಂದು ಅದನ್ನು ನಗರ ಪಾಲಿಕೆಗೆ ಹ್ಯಾಂಡ್ ಓವರ್ ಮಾಡಲಿಕ್ಕೋಸ್ಕರವಾಗಿ ಸರ್ಕಾರದಿಂದ ಒಂದು ಆದೇಶವನ್ನು ಹೊರಡಿಸಿದ್ದೀರಿ. ಆದರೆ ಇವತ್ತೂ ಕೂಡ ಅದು ಎಕ್ಸಿಕ್ಯೂಟ್ ಆಗಿಲ್ಲ, ಇಲ್ಲಿ ಸಮಸ್ಯೆ ಇರುವಂತಹದು. ಮೈಂಟೆನೆನ್ಸ್ ಏನು ಕೊಡಬೇಕಾಗಿದೆ ಮತ್ತು ಈ ಕಾರ್ಯ ಪ್ರಾರಂಭವಾಗಬೇಕಾಗಿದೆ. ಇವತ್ತೂ ಕೂಡ ತಾವು ಕೊಟ್ಟಿರುವಂತಹ ಉತ್ತರದಲ್ಲಿ ರಸ್ತೆಯನ್ನು ಡಾಂಬರೀಕರಣ ಮಾಡಲು ಯೋಜಿಸಲಾಗಿದೆ ಎಂದು ಹೇಳಿದ್ದೀರಿ. ಅದು ಒಂದು ವರ್ಷಗಳ ಕಾಲದಿಂದಲೂ ಕೂಡ ಇದೇ ರೀತಿ ಇದೆ. ಯಾವ ನಿರ್ದಿಷ್ಟವಾದಂತಹ ಸಮಯದೊಳಗೆ ಡಾಂಬರೀಕರಣವನ್ನು ಮುಗಿಸುತ್ತೀರಿ? ಯಾವತ್ತು ನಗರಪಾಲಿಕೆಗೆ ಹ್ಯಾಂಡ್ ಓವರ್ ಮಾಡುತ್ತೀರಿ? ಒಂದು ಕಿಲೋಮೀಟರ್‌ಗೆ ಮೈಂಟೆನೆನ್ಸ್‌ಗೋಸ್ಕರವಾಗಿ ನೀವು ಅವರಿಗೆ ಏನನ್ನು ಕೊಡುತ್ತೀರಿ? ದಯವಿಟ್ಟು ತಾವು ಈ ಮೂರು ವಿಚಾರಗಳನ್ನು ಹೇಳಬೇಕು.

ಶ್ರೀ ಧರ್ಮಸಿಂಗ್:- ಸರ್ಕಾರ ಹ್ಯಾಂಡ್ ಓವರ್ ಮಾಡತಕ್ಕಂಥದ್ದು, ನಾವು ಈ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿಕೊಟ್ಟಿದ್ದೇವೆ, ಅದು ಬಂದ ನಂತರ ನಾವು ಹಸ್ತಾಂತರ ಮಾಡುತ್ತೇವೆ.?

ಬೆಳಗಾಂ ವಿಭಾಗದ ದೇವಸ್ಥಾನಗಳಿಗೆ ಮಂಜೂರಾದ ಹಣ

67 (296) ಶ್ರೀ ಪಾಟೀಲ್ ಸಿದ್ಧಲಿಂಗನಗೌಡ ಸಿದ್ದನಗೌಡ (ಮುಂಡರಗಿ) ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಸರ್ಕಾರದಿಂದ ದೇವಸ್ಥಾನಗಳಿಗೆ ಬೆಳಗಾವಿ ವಿಭಾಗಕ್ಕೆ ಮಂಜೂರಾದ ಹಣ ತೆಗೆದುಕೊಳ್ಳಲು ಟ್ರಸ್ಟ್ ಕಮಿಟಿ ಮಾಡುವ ತೊಂದರೆಯಿಂದ ಖರ್ಚಾಗದೇ ಹಿಂದಕ್ಕೆ ಪಡೆದಿರುವ ಹಣವೆಷ್ಟು ಹಾಗೂ ಆ ದೇವಸ್ಥಾನಗಳ ವಿವರ ನೀಡವುದು?

2. ಹಾಗೇ ಹಿಂದಕ್ಕೆ ಪಡೆದ ಹಣವನ್ನು ಅದೇ ದೇವಸ್ಥಾನಗಳಿಗೆ ಮತ್ತೆ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದು, ಸದರಿ ಹಣವನ್ನು ಮರಳಿನೀಡಲಾಗಿದೆಯೇ?

3. ಕೊಡದಿದ್ದರೆ, ಯಾವಾಗ ನೀಡಲಾಗುವುದು?

1. ಬೆಳಗಾಂ ವಿಭಾಗಕ್ಕೆ ಮಂಜೂರಾದ ಹಣ ತೆಗೆದುಕೊಳ್ಳಲು ಬಾಂಬೆ ಪಬ್ಲಿಕ್ ಟ್ರಸ್ಟ್ 1950 ಕಾಯ್ದೆಯನ್ವಯ ಟ್ರಸ್ಟ್ ಕಮಿಟಿ ರಚನೆಯಾಗದಿರುವ ತೊಂದರೆಯಿಂದ ಖರ್ಚಾಗದೆ ಉಳಿದ ಮೊತ್ತ ಹಿಂದಕ್ಕೆ ಪಡೆದಿರುವ ಹಣ ರೂ. 36.10 ಲಕ್ಷಗಳ ಮತ್ತು ಇದರ ಮೇಲಿನ ಬಡ್ಡಿ ಹಣ ರೂ. 4,67,468-00 ಒಟ್ಟು 40,77,468-00 ರೂ. ಗಳು.

(1998-99ನೇ ಸಾಲಿನಲ್ಲಿ ಹಿಂದಕ್ಕೆ ಪಡೆದ ಧಾರ್ಮಿಕ ಸಂಸ್ಥೆಗಳ ವಿವರ ಅನುಬಂಧ-1-6ರಲ್ಲಿ ಲಗತ್ತಿಸಿದೆ).